ಅಸಲು ದಾವೆ ನಂ.97/2022

ಪಿ.ಡಬ್ಲೂಃ 2

ದಿನಾಂಕಃ 21/07/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರವಾಗಿ ವಕೀಲರಿಂದ**

1. ಗಂಕುಲರೆಡ್ಡಿಯವರ ತಮ್ಮ ವೆಂಕಟರೆಡ್ಡಿಯವರು ಮೃತಪಟ್ಟು ಸುಮಾರು 63 ವರ್ಷ ಆಗಿರುತ್ತದೆ. ಸದರಿಯವರು ಮೃತಪಟ್ಟ ನಂತರದಲ್ಲಿ ಮನೆಯ ಎಲ್ಲಾ ಜವಾಬ್ದಾರಿಯನ್ನು ಗಂಟ್ಲಮ್ಮರವರು ನೋಡಿಕೊಂಡಿರುತ್ತಾರೆ. ವ್ಯವಸಾಯವನ್ನು ಎಲ್ಲರೂ ಸೇರಿಕೊಂಡು ಮಾಡುತ್ತಿದ್ದರು. 1 ಮತ್ತು 2 ನೇ ವಾದಿ ಹಾಗೂ 5 ನೇ ಪ್ರತಿವಾದಿಯವರ ಮದುವೆಯನ್ನು ನನ್ನ ಅಜ್ಜಿಯಾದ ಗಂಟ್ಲಮ್ಮರವರು ಮಾಡಿರುತ್ತಾರೆ. ಅದೇ ರೀತಿ ಮದುವೆಯ ಖರ್ಚು ವೆಚ್ಚವನ್ನು ಯಾರು ನೋಡಿಕೊಂಡಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ವೆಂಕಟರೆಡ್ಡಿರವರು ಮೃತಪಟ್ಟ ನಂತರದಲ್ಲಿ ಅವರ ಹಿರಿಯ ಮಗನಾದ ಗೋಪಾಲರೆಡ್ಡಿಯವರು 1 ಮತ್ತು 2 ನೇ ವಾದಿ ಹಾಗೂ 5 ನೇ ಪ್ರತಿವಾದಿಯವರ ಮದುವೆಯನ್ನು ಮಾಡುತ್ತಾರೆ ಎಂದರೆ ಸುಳ್ಳು. ಸದರಿ ಗೋಪಾಲರೆಡ್ಡಿಯವರು ಮದುವೆಯ ಖರ್ಚಿಗೋಸ್ಕರ ಮತ್ತು ಮನೆಯ ಜವಾಬ್ದಾರಿಯ ಖರ್ಚಿಗೋಸ್ಕರ ದಾವಾ ಶೆಡ್ಯೂಲ್ ಐಟಂ 1 ಮತ್ತು 2 ನ್ನು 7 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಗೋಪಾಲರೆಡ್ಡಿಯವರು ಸದರಿ ಸ್ವತ್ತುಗಳನ್ನು ಮನೆಯ ಖರ್ಚು ವೆಚ್ಚವನ್ನು ಹಾಗೂ ಜವಾಬ್ದಾರಿಯನ್ನು ನೋಡಿಕೊಳ್ಳುವ ಸಲುವಾಗಿ ಮಾರಾಟ ಮಾಡಿರುತ್ತಾರೆ ಹೊರತು ದುರುಪಯೋಗಪಡಿಸಿಕೊಂಡಿರುವುದಿಲ್ಲ ಎಂದರೆ ಸುಳ್ಳು. 7 ನೇ ಪ್ರತಿವಾದಿಯವರು ದಾವಾ ಶೆಡ್ಯೂಲ್ ಐಟಂ ನಂ.1 ಮತ್ತು 2 ಆಸ್ತಿಯನ್ನು ಖರೀದಿಸಿದ ನಂತರದಲ್ಲಿ ರೆವೆನ್ಯೂ ದಾಖಲೆಗಳು ಅವರ ಹೆಸರಿನಲ್ಲಿ ಬದಲಾಗುತ್ತದೆ ಎಂದರೆ ಸರಿ. ಅದೇ ರೀತಿ 7 ನೇ ಪ್ರತಿವಾದಿಯವರು ಸದರಿ ಆಸ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿಸುತ್ತಿದ್ದಾರೆ ಎಂದರೆ ಸರಿ.

2. 1 ನೇ ವಾದಿಯವರು ನ್ಯಾಯಾಲಯಕ್ಕೆ ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. 1 ನೇ ವಾದಿಯವರು ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಸರಿ. 1 ನೇ ವಾದಿಯವರಿಗೆ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ಕನ್ನಡ ಭಾಷೆ ಸರಿಯಾಗಿ ಗೊತ್ತಾಗುವುದಿಲ್ಲ ಮತ್ತು ಅವರಿಗೆ 67 ವರ್ಷ ವಯಸ್ಸು ಆಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ವಾದಿಯವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ಅವರನ್ನು ನ್ಯಾಯಾಲಯಕ್ಕೆ ಕಳುಹಿಸಿರುವುದಿಲ್ಲ ಎಂದರೆ ಸುಳ್ಳು. ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಕೂಡ ಎಲ್ಲಾ ವಾದಿಗಳು ಮತ್ತು ಪ್ರತಿವಾದಿ 1 ರಿಂದ 6 ರವರು ಸೇರಿಕೊಂಡು 7 ನೇ ಪ್ರತಿವಾದಿ

ಯವರಿಗೆ ಮೋಸ ಮಾಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ದಾಖಿಸಿರುತ್ತೇವೆ ಎಂದರೆ ಸುಳ್ಳು.

**<u>ಮರು ವಿಚಾರಣೆ:</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್